ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಮಂಡಿಸಿದೆ.
	ವಿಷಯ:- Improvements to Roads and Drains at Kuvempunagara 2nd Stage and surrounding area in Ward No.11 Kuvempunagara ಕಾಮಗಾರಿಯನ್ನು ತುರ್ತು ಕಾಮಗಾರಿಯೆಂದು ಪರಿಗಣಿಸಿ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡುವ ಕುರಿತು. ಅಂದಾಜು ಮೊತ್ತ:- ರೂ. 99.00 ಲಕ್ಷಗಳು ಜಾಬ್ ಕೋಡ್ ಸಂಖ್ಯೆ: 011-20-000002
01)	ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬಿಬಿಎಂಪಿ ವಿದ್ಯಾರಣ್ಯಪುರ ಉಪವಿಭಾಗದ ಕುವೆಂಪುನಗರ ವಾರ್ಡ್ ನಂ. 11ಕ್ಕೆ ಸಂಬಂಧಿಸಿದಂತೆ ಘನ ಸರ್ಕಾರವು ವಾರ್ಡ್ ಮಟ್ಟದಲ್ಲಿ 2018-19ನೇ ಸಾಲಿನ ಆಯವ್ಯದಲ್ಲಿ ಘೋಷಿಸಿರುವ ಒಟ್ಟು ರೂ. 2500.00 ಕೋಟಿಗಳ ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪೂರ್ವಭಾವಿ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಅದರಂತೆ, ರೂ. 2500.00 ಕೋಟಿಗಳ ಜೊತೆಯಲ್ಲಿ 5515.37 ಕೋಟಿಗಳ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ. 8015.37 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳುವ ಕ್ರಿಯಾ ಯೋಜನೆಗೆ 16 ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಿದೆ.
02)	ಮುಂದುವರೆದು, 2018-19ನೇ ಸಾಲಿನ "ಮುಖ್ಯ ಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ವಿವಿಧ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ P3727 SC-SP/TSP Mukyamantrigala Nava Bengaluru Yojane ಯಡಿ ಕಲ್ಪಿಸಿದೆ. ಈ ಪೈಕಿ ಕಾಮಗಾರಿ ಜಾಬ್ ಸಂಕೇತ 011-20-000002 ರೂ. 99.00 ಗಳಿಗೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಯ ವಾರ್ಡ್ 11ರ ಪ್ರದೇಶವು ಹಿಂದಿನ ಬ್ಯಾಟರಾಯನಪುರ ನಗರಸಭೆಯಿಂದ ಪಾಲಿಕೆಗೆ ಹಸ್ತಾಂತರವಾದ ಪ್ರದೇಶಗಳಾಗಿದ್ದು, ಹಿಂದಿನ ಬ್ಯಾಟರಾಯನಪುರ ನಗರಸಭೆಯಿಂದ ಪಾಲಿಕೆಗೆ ಹಸ್ತಾಂತರವಾದ ಬಡಾವಣೆಗಳಲ್ಲಿ ಸರಿಯಾದ ಮೂಲಭೂತ ಸೌಕರ್ಯಗಳಿಲ್ಲದೆ ರಸ್ತೆ ಮತ್ತು ಚರಂಡಿಗಳು ತುಂಬಾ ದುಸ್ಥಿತಿಯಲ್ಲಿರುತ್ತದೆ. ಆದುದರಿಂದ ರಸ್ತೆಗಳಲ್ಲಿ ದಿನನಿತ್ಯ ಸಾರ್ವಜನಿಕರು ಮತ್ತು ವಾಹನಗಳು ಹಾಗೂ ಶಾಲಾ ಮಕ್ಕಳ ಸುಗಮ ಸಂಚಾರಕ್ಕೆ ತೊಂದರೆಯುಂಟಾಗಿರುತ್ತದೆ.
03)	ಸದರಿ ಮೇಲ್ಕಂಡ ಕಾಮಗಾರಿಯಲ್ಲಿ ಕೈಗೊಳ್ಳಲಾಗಿರುವ ಬಡಾವಣೆ ರಸ್ತೆಗಳು ತುಂಬಾ ದುಸ್ಥಿತಿಯಲ್ಲಿದ್ದು, ತುರ್ತಾಗಿ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದ್ದು, " ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾಯೋಜನಲ್ಲಿ ಅನುದಾನವನ್ನು ಹಂಚಿಕೆ ಮಾಡಿ ಕಾಮಗಾರಿಗಳು ಸರ್ಕಾರದಿಂದ ಅನುಮೋದನೆಗೊಂಡಿರುತ್ತವೆ. ಈ ಕುರಿತು ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಸರ್ಕಾರದ ಆದೇಶದ ಸಂಖ್ಯೆ:ನಅಇ 250 ಎಂಎಸ್‌ಪೈ 2019 ಬೆಂಗಳೂರು ದಿನಾಂಕ: 15.10.2019ರಂತೆ ಸದರಿ ಕಾಮಗಾರಿಯನ್ನು ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಆದೇಶ ನೀಡಲಾಗಿರುತ್ತದೆ. ಪ್ರತಿ ಲಗತ್ತಿಸಿದೆ.
04)	ಸದರಿ ಕಾಮಗಾರಿಯ ಪ್ರದೇಶದಲ್ಲಿ ಶೇ.50 ಕಿಂತ ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆ ಇರುವ ಪ್ರದೇಶಗಳಾಗಿರುತ್ತದೆ. ಸರ್ಕಾರದ ಆದೇಶದಂತೆ SC-SP/TSP ಕಾಯ್ದೆಗೆ ಅನುಗುಣವಾಗಿ ಸಹಾಯಕ ಕಂದಾಯ ಅಧಿಕಾರಿ, ವಿದ್ಯಾರಣ್ಯಪುರ ಉಪವಿಭಾಗ ರವರು ದೃಢೀಕರಿಸಿರುತ್ತಾರೆ. (ಪ್ರತಿಯನ್ನು ಲಗತ್ತಿಸಿದೆ)

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಆದುದರಿಂದ ಸದರಿ ಕಾಮಗಾರಿಗೆ 2018-19ನೇ ಸಾಲಿನ ಪಿಡಬ್ಲ್ಯೂಡಿ, ಬೆಂಗಳೂರು ವೃತ್ತ ದರಪಟ್ಟಿಯಂತೆ ಹಾಗೂ ಅನುಮೋದಿತವಾಗಿರುವ ಡೇಟಾ ದರಗಳಂತೆ ರೂ. 99.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ, ಈ ಅಂದಾಜು ಪಟ್ಟಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ
05) ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು "ಅತಿ ತುರ್ತು ಕಾಮಗಾರಿಯೆಂದು ಪರಿಗಣಿಸಿ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡಲು ತಮ್ಮ ಮುಂದಿನ ಆದೇಶ ಕೋರಿ ಕಡತವನ್ನು ಮಂಡಿಸಿದೆ.

06) ಸಹಾಯಕ ಅಭಿಯಂತರರು
ವಾರ್ಡ್ ನಂ. 11

ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

Assistant Executive Engineer
Vidyaranyapura Sub Division
BBMP, Bangalore - 97

ಕಾ.ಪಾ.ಅ, (ಬ್ಯಾ.ವಿ)

ಕಂಡಿಕೆ (01) ರಿಂದ (05) ರವರೆಗೆ ವಿವರಿಸಿರುವಂತೆ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸ.ಕಾ.ಅ, ವಿದ್ಯಾರಣ್ಯಪುರ ಉಪವಿಭಾಗ ರವರು ಸದರಿ ಕಾಮಗಾರಿಯನ್ನು ಕೈಗೊಳ್ಳುವ ಪ್ರದೇಶದಲ್ಲಿ ಶೇ. 50 ಕ್ಕಿಂತ ಹೆಚ್ಚಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ವಾಸುತ್ತಿರುವ ಬಗ್ಗೆ ಸಹಾಯಕ ಕಂದಾಯ ಅಧಿಕಾರಿರವರಿಂದ ದೃಢೀಕರಣ ಪಡೆದು (ಪ್ರತಿಯನ್ನು ಲಗತ್ತಿಸಿದೆ) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಹಾಗೂ ಸರ್ಕಾರದ ಆದೇಶದ ಸರ್ಕಾರದ ಆದೇಶದ ಸಂಖ್ಯೆ:ನಅಇ 250 ಎಂಎನ್‌ವೈ 2019 ಬೆಂಗಳೂರು ದಿನಾಂಕ: 15.10.2019ರ ಆದೇಶದಂತೆ ಈ ಕಾಮಗಾರಿಯನ್ನು
07) ಅತಿ ತುರ್ತು ಎಂದು ಪರಿಗಣಿಸಿ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ನೀಡಲು ಮಾನ್ಯ ಆಯುಕ್ತರಿಗೆ ಕಡತವನ್ನು ಸಲ್ಲಿಸಲು ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

23/10
ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ)

ಮುಖ್ಯ ಅಭಿಯಂತರರು (ಯ.ವ)

08) ಕಂಡಿಕೆ (01) ರಿಂದ (07) ರವರೆಗೆ ಅವಹಾನೆಗೆ ತರುತ್ತಾ, ಸದರಿ ವಾರ್ಡ್‌ನ ಪ್ರದೇಶದ ರಸ್ತೆಗಳು ಬಿಬಿಎಂಪಿಯ ಹೊಸ ಹೊರವಲಯಕ್ಕೆ ಸೇರ್ಪಡೆಗೊಂಡ ರಸ್ತೆಗಳಾಗಿರುತ್ತದೆ. ಸದರಿ ರಸ್ತೆಗಳು ತುಂಬಾ ಹದಗೆಟ್ಟಿದ್ದು, ಸಾರ್ವಜನಿಕರು ಸದರಿ ರಸ್ತೆಗಳನ್ನು ತುರ್ತಾಗಿ ಅಭಿವೃದ್ಧಿ ಪಡಿಸಲು ಬೇಡಿಕೆ ಇಟ್ಟಿರುತ್ತಾರೆ. ಈ ಕಾಮಗಾರಿಯ ಅವಶ್ಯಕತೆ ಹಾಗೂ ಸಾರ್ವಜನಿಕರ ಸೇವಾ ಹಿತದೃಷ್ಟಿಯಿಂದ ಈ ಕುರಿತು ಸರ್ಕಾರದ ಆದೇಶದ ಸಂಖ್ಯೆಸರ್ಕಾರದ ಆದೇಶದ ಸಂಖ್ಯೆ:ನಅಇ 250 ಎಂಎನ್‌ವೈ 2019 ಬೆಂಗಳೂರು ದಿನಾಂಕ: 15.10.2019ರಂತೆ ಆದೇಶದಲ್ಲಿ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಆಯುಕ್ತರ ವಿಶೇಷ ಅನುಮತಿ ನೀಡಲಾಗಿರುತ್ತದೆ. ಈ ಎಲ್ಲಾ ಅಂಶಗಳು ಹಿನ್ನಲೆಯಲ್ಲಿ ಈ ಕಾಮಗಾರಿಯನ್ನು ತುರ್ತು ಕಾಮಗಾರಿಯೆಂದು ಪರಿಗಣಿಸಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಆಯುಕ್ತರ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

Para 9/N for Perusal and Approval

23/10/19

ಮುಖ್ಯ ಅಭಿಯಂತರರು (ಯ.ವ)

10) ಕಂಡಿಕೆ 7ನೇ ಅನುಮೋದನೆಗೆ

24/x

Commissioner
Bruhat Bengaluru Palike

ವಿಶೇಷ ಆಯುಕ್ತರು (ಯೋಜನೆ)